ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821-2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

Company Identity Number (CIN):U40109KA2004SGC035177

08 JAN 2024

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2023-24/ CYS- 128 ದಿನಾಂಕ: 08 JAN 2024

## -: ಸಭೆಯ ನಡಾವಳಿಗಳು :-

ದಿನಾಂಕ 06.12.2023 ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ಯಳಂದೂರು ಉಪವಿಭಾಗದಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ. ಚಾ.ನಗರ ಕೊಡಗು ವೃತ್ತ ಮೈಸೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ.ಎಂ.ಕೆ.ಸೋಮಶೇಖರ್ : ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ. ಚಾ.ನಗರ ಕೊಡಗು ವೃತ್ತ ಮೈಸೂರು.
2. ಶ್ರೀ.ಎಸ್.ಲಿಂಗರಾಜು : ಕಾರ್ಯನಿರ್ವಾಹಕ ಇಂಜಿನಿಯರ್(ವಿ),(ಪ್ರಭಾರ) ಕಾ & ಪಾ ವಿಭಾಗೀಯ ಕಛೇರಿ ಕೊಳ್ಳೇಗಾಲ.
3. ಶ್ರೀ.ಮದನ್ ಹೆಚ್.ಪಿ : ಸಹಾಯಕ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ ಯಳಂದೂರು
4. ಶ್ರೀ.ಜಿ.ರಂಗಸ್ವಾಮಿ : ಶಾಖಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಶಾಖೆ ಮಾಂಬಳ್ಳಿ
5. ಬಿ.ನಿರಂಜನ್‌ಕುಮಾರ್ : ಹಿರಿಯ ಸಹಾಯಕ (ಪ್ರಭಾರ) ಕಾ ಮತ್ತು ಪಾ ಉಪವಿಭಾಗ ಯಳಂದೂರು.

ಅದೀಕ್ಷಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಜನ ಸಂಪರ್ಕ ಸಭೆ ಆಯೋಜಿಸಿ ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ್ದು ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆದ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

ಸಭೆಯಲ್ಲಿ ಯಳಂದೂರು ಉಪವಿಭಾಗಕ್ಕೆ ಸಂಬಂದಿಸಿದಂತೆ,ಬಂದ ದೂರುಗಳ ವಿವರಗಳು ಈ ಕೆಳಗಿನಂತಿರುತ್ತವೆ.

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಕ್ರಮ |
|---|---|---|---|
| 1 | ಶ್ರೀ.ಚಂದ್ರು, ಗಣಿಗನೂರು | * 100 ಕೆ.ವಿಎ ನೀಲಯ್ಯ ಪರಿವರ್ತಕ ಕೇಂದ್ರದಲ್ಲಿರುವ ಬಾಗಿರುವ ಕಂಬಗಳನ್ನು ಸರಿಪಡಿಸಲು ಕೋರಿರುತ್ತಾರೆ ಮತ್ತು ಕೃಷ್ಣಾಪುರ ಗ್ರಾಮದಲ್ಲಿ ಮನೆ ಮೇಲೆ ಹಾದುಹೋಗಿರುವ ಹೆಚ್.ಟಿ ಮಾರ್ಗವನ್ನು ಬದಲಾಯಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ಚಾ.ನಗರ-ಕೊಡಗು ವೃತ್ತ ರವರು ಬಾಗಿರುವ ಕಂಬಗಳನ್ನು ಸರಿಪಡಿಸಲು ಸ್ಥಳದಲ್ಲಿದ್ದ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು ಹಾಗೂ ಕೃಷ್ಣಾಪುರ ಗ್ರಾಮದ ಹೆಚ್.ಟಿ ಮಾರ್ಗವನ್ನು ಸ್ಥಳಾಂತರಿಸಲು ವಿಭಾಗೀಯ ಕಛೇರಿಗೆ ಅಂದಾಜುಪಟ್ಟಿ ಸಲ್ಲಿಸಲಾಗಿದ್ದು ಅನುಮೋಧನೆಗೊಂಡಿರುತ್ತದೆ. |
| 2 | ಶ್ರೀ.ಮಹದೇವಸ್ವಾಮಿ, ಯಳಂದೂರು | * 100 ಕೆ.ವಿಎ ಮತ್ತು 63 ಕೆ.ವಿ.ಎ 2 ಚಾನಲ್ ಪರಿವರ್ತಕ ಕೇಂದ್ರದಲ್ಲಿರುವ ಬಾಗಿರುವ ಕಂಬಗಳನ್ನು ಸರಿಪಡಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ಚಾ.ನಗರ-ಕೊಡಗು ವೃತ್ತ ರವರು ಬಾಗಿರುವ ಕಂಬಗಳನ್ನು ಸರಿಪಡಿಸಲು ಸ್ಥಳದಲ್ಲಿದ್ದ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 3 | ಶ್ರೀ.ಲಿಂಗರಾಜು ಬಿನ್ ಶಿವರುದ್ರಪ್ಪ, ಮಲಾರಪಾಳ್ಯ | * ಅಕ್ರಮ ಸಕ್ರಮ ಯೋಜನೆಯಡಿ ಹಣ ಸಂದಾಯ ಮಾಡಿರುವ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲು ಕೋರಿರುತ್ತಾರೆ. | * ಅಧೀಕ್ಷಕ ಇಂಜಿನಿಯರ್(ವಿ) ಮೈಸೂರು ರವರು ಅಂದಾಜು ಪಟ್ಟಿಯನ್ನು ಮಂಜೂರಾತಿಗಾಗಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ ಎಂದು ತಿಳಿಸಲಾಯಿತು. |

| | | | |
|---|---|---|---|
| 4 | ಶ್ರೀ.ಪ್ರಕಾಶ್, ಜಿಲ್ಲಾ ರೈತ ಸಂಘದ ಅಧ್ಯಕ್ಷರು, ಹೊನ್ನೂರು | 1.ಮರಾಣಿಮೋಡು ವಿದ್ಯುತ್ ಸಂಪರ್ಕ ಕೋರಿ.<br>2. ಜುಲೈ 2023 ರ ಅಂತ್ಯಕ್ಕೆ ಬಾಕಿ ಇರುವ ಗೃಹ ಬಳಕೆಯ ಕಂದಾಯವನ್ನು ಸರ್ಕಾರದಿಂದ ಭರಿಸಿಕೊಳ್ಳಲು ಕೋರಿರುತ್ತಾರೆ.<br>3. ಮರಾಣಿಮೋಡಿಗೆ DDUGJY ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ನೀಡಿರುವ ಮನೆಗಳಿಗೆ ವಿದ್ಯುತ್ ದೀಪಗಳು ಉರಿಯುತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ. | * ಅಧೀಕ್ಷಕ ಇಂಜನಿಯರ್(ವಿ) ಮೈಸೂರು ರವರು<br>1.ಮರಾಣಿಮೋಡು ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.<br>2. ಗ್ರಾಹಕರೇ ಕಂದಾಯ ಬಾಕಿ ಪಾವತಿಸುವಂತೆ ತಿಳಿಸಲಾಯಿತು.<br>3. ಕೂಡಲೇ ಸದರಿ ಯೋಜನೆಗೆ ಸಂಬಂಧಿಸಿದಂತೆ ಉಪಕರಣಗಳ ರಿಪೇರಿಯನ್ನು ಆದ್ಯತೆಯ ಮೇಲೆ ಕ್ರಮಕೈಗೊಳ್ಳಲು ಶಾಖಾಧಿಕಾರಿಯವರಿಗೆ ತಿಳಿಸಿರುತ್ತಾರೆ. |

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ ಕೊಳ್ಳೇಗಾಲ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾ.ವಿ.ಸ.ನಿ.ನಿ., ಯಳಂದೂರು ಉಪವಿಭಾಗ ರವರ ಮಾಹಿತಿಗಾಗಿ. ಹಾಗೂ ದೂರುಗಳ ಪರಿಹಾರಕ್ಕೆ ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
7. ಹಿಆಸ/ಪ್ರಕ/ಕಡತ.